**ದಿನಾಂಕ 16-06-2026 ರಂದು ಸಾಕ್ಷಿಯವರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು : ಶ್ರೀ.ಎಸ್.ಸಿ.ಯು ವಕೀಲರಿಂದ ವಾದಿ ಪರವಾಗಿ**

1.ನೀವು ಕೌಂಟರ ಕ್ಲೇಮಗೆ ಸಲ್ಲಿಸಲು ಪ್ರತಿವಾದ ಪತ್ರದಲ್ಲಿ ಸರ್ವೆ ನಂ.39/3 ರ ಜಂಟಿ ಮಾಲೀಕರು ಎಂದು ಘೋಷಿಸಲು ಪ್ರಾರ್ಥಿಸಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಸರ್ವೆ ನಂ.39/3 ಇದು ಜಂಟಿ ಮಾಲೀಕತ್ವದ್ದು ಎಂದು ಘೋಷಿಸಲು ಕೌಂಟರ ಕ್ಲೇಮ ಸಲ್ಲಿಸಲು ನೀವು ಮಾಹಿತಿ ನೀಡಿದ್ದೀರಾ ಎಂದರೆ ನಾನೊಬ್ಬನೇ ಮಾಲೀಕನು ಎಂದು ಘೋಷಿಸಲು ಮಾಹಿತಿ ನೀಡಿರುತ್ತೇನೆ ಎಂದು ಹೇಳುತ್ತಾರೆ. ನಾನು ಪ್ರತಿವಾದ ಪತ್ರ ಮತ್ತು ಕೌಂಟರ ಕ್ಲೇಮನಲ್ಲಿ ನಮೂದಿಸಿದ ವಿಷಯ ತಿಳಿದು ಸಹಿ ಮಾಡಿರುತ್ತೇನೆ. ನನ್ನ ಪ್ರಕಾರ ನಾನ್ನೊಬ್ಬನೇ ಮಾಲೀಕ ಎಂದು ತಕರಾರು ಸಲ್ಲಿಸಲು ಮಾಹಿತಿ ನೀಡಿದ್ದೇನೆ. ಸರ್ವೆ ನಂ.39/3 ರ ಆಸ್ತಿಯಲ್ಲಿ ಜಂಟಿ ಮಾಲೀಕತ್ವ ಘೋಷಿಸಲು ವಾದಿಗೆ ಯಾವುದೇ ತಕರಾರು ಇಲ್ಲ ಎಂದರೆ ಆತ ತಕರಾರು ಮಾಡಿದ್ದಾನೆ ಎಂದು ಹೇಳುತ್ತಾರೆ. ಪ್ರತಿವಾದಿ-3 ರವರು ಸರ್ವೆ ನಂ.64/3 ರ ಆಸ್ತಿಯನ್ನು ಖರೀದಿಸಿದ್ದು ಅದಕ್ಕೆ ಸಂಬಂಧಿಸಿದಂತೆ ವಾದಿ ಮತ್ತು ಪ್ರತಿವಾದಿ-1 ರವರಾದ ನಿಮಗೆ ಕರೆದು ಖರೀದಿದಾರಿಗೆ ಯಾರು ತಕರಾರು ಮಾಡಬಾರದು ಎಂದು ಹಿರಿಯರು ಹೇಳಿದ್ದರು ಸರಿ. ಆ ರೀತಿ ಹಿರಿಯರು ಹೇಳಿದ ಮಾತನ್ನು ಕೇಳಿ ನೀವೆಲ್ಲರೂ ನ್ಯಾಯಾಲಯಕ್ಕೆ ಬಂದು ಸರ್ವೆ ನಂ.64/3 ಕ್ಷೇತ್ರ 1 ಏಕರೆ 35 ಗುಂಟೆ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ಹಕ್ಕು ಕೇಳುವುದಿಲ್ಲ ಎಂದು ಒಪ್ಪಿಕೊಂಡಿರಿ ಎಂದರೆ ಸರಿ. ಆದ್ದರಿಂದ ದಾವೆ 3 ನೇ ಪ್ರತಿವಾದಿಯ ವಿರುದ್ಧ ವಜಾ ಆಗಿದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ನೀಡಿ ಮುಂದೂಲಡಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)
ಓ. ಹೇ. ಕೇ. ಸರಿ ಅದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು
ಜೆ.ಎಂ.ಎಫ್.ಸಿ., ಮುಧೋಳ